

ತನ್ನಿಮಿತ್ತ

ಎಲ್. ಭಾನುಪ್ರಕಾಶ್

l.bhanuprakash@outlook.com

ಸವಾಲುಗಳೇ ಅಮಿತ್ ಶಾ ಗೆಲುವಿನ ಮೆಟ್ಟಿಲುಗಳು..!

ಕಳೆದ ಒಂದು ದಶಕದಿಂದೀಚೆಗೆ ದೆಹಲಿ ರಾಜಕೀಯ ಮೊಗಸಾಲೆಯಲ್ಲಿ ಹೆಚ್ಚು ಸದ್ದು ಮಾಡುತ್ತಿರುವ ಹೆಸರು ಅಮಿತ್ ಶಾ. ಪ್ರಧಾನಿ ನರೇಂದ್ರ ಮೋದಿ ನಂತರದಲ್ಲಿ ಅತ್ಯಂತ ಪ್ರಭಾವಿ ವರ್ಚಸ್ಸನ್ನು ಹೊಂದಿರುವ ನಾಯಕ. ನರೇಂದ್ರ ಮೋದಿ ಸರಕಾರ ರಾಜಕೀಯವಾಗಿ ಎದುರಿಸುವ ಸವಾಲುಗಳನ್ನು ನಿರಾಯಾಸವಾಗಿ ಪರಿಹರಿಸುವ ಟ್ರಬಲ್ ಶೂಟರ್. ಶಾ ಜನಿಸಿದ್ದು 22 ಅಕ್ಟೋಬರ್ 1964, ಮುಂಬೈನಲ್ಲಿ. ಹುಟ್ಟು ಶ್ರೀಮಂತಿಕೆಯಲ್ಲಿ ಜನಿಸಿದ್ದರೂ, ಬೆಳೆದಿದ್ದು ಮಾತ್ರ ಶ್ರೀಸಾಮಾನ್ಯನಂತೆ. ಬಾಲ್ಯದಲ್ಲಿ ಅರಬಿಂದೋ ಅವರ ತತ್ತ್ವಗಳಿಂದ ಪ್ರಭಾವಿತರಾಗಿ, ನಂತರ ಆಕರ್ಷಿತವಾಗಿದ್ದು ಭಾರತೀಯ ವಿದ್ಯಾಭವನದ ಸಂಸ್ಥಾಪಕ ಕೆ.ಎಂ. ಮುನಷಿರವರ ಬರಹಗಳಿಗೆ. ಆದರೆ ಇವತ್ತಿಗೂ ಅಮಿತ್ ಶಾ ಮನಸ್ಸಿನಲ್ಲಿ ಅಚ್ಚಳಿಯದೆ ನೆಲೆ ನಿಂತಿರುವುದು 9ನೇ ವಯಸ್ಸಿನಲ್ಲಿ ಓದಿದ ಕೌಟಿಲ್ಯನ ರಾಜಕೀಯ ಚಿಂತನೆಗಳು. ಅಮಿತ್ ಶಾ ಅವರ ರಾಜಕೀಯ ನಡೆಗಳು ಹೇಗೆ ಕುತೂಹಲ ಹುಟ್ಟಿಸುತ್ತವೆಯೋ, ಅವರ ಬಗ್ಗೆ ಎಲ್ಲವೂ ತಿಳಿದಿದೆ ಎಂದು ಖಚಿತವಾಗಿ ಹೇಳುವ ಯಾವ ವ್ಯಕ್ತಿಯೋ ಇಲ್ಲ.

ಅಮಿತ್ ಶಾ ಬದುಕಿನ ಪಥವನ್ನು ವಿಶ್ಲೇಷಣೆ ಮಾಡಿ, ನಾವು ಕಲಿಯಬೇಕಾದ ವಿಷಯವೆಂದರೆ; ಸವಾಲುಗಳನ್ನು ಹೇಗೆ ಅವಕಾಶಗಳಾಗಿ ಪರಿವರ್ತಿಸುವುದು. ಹಾಗೆ ನೋಡಿದರೆ ಶಾ ರಾಜಕೀಯ ಹಾದಿ ಸುಗಮದಲ್ಲ, ದುರ್ಗಮ ಪರ್ವತವನ್ನೇರುವಾಗ ಸಿಗುವ ಕಲ್ಲು ಮುಳ್ಳುಗಳ ದಾರಿಯಂತಿದೆ. 1980ರಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಾಮಾನ್ಯ ಸದಸ್ಯನಿಂದ, 2019ರ ಗೃಹ ಸಚಿವರಾಗುವವರೆಗೆ ಹತ್ತಾರು ಹುದ್ದೆಯನ್ನು ನಿಭಾಯಿಸಿ ಜಯಿಸಿದ್ದಾರೆ. 1997ರಲ್ಲಿ ಗುಜರಾತ್‌ನ ಸರ್ಖೆಜ್ ಕ್ಷೇತ್ರದಿಂದ ವಿಧಾನಸಭೆ ಪ್ರವೇಶಿಸಿದ ಅಮಿತ್ ಶಾ, ವಿರೋಧಿಗಳು ಒಡ್ಡುವ ಎಲ್ಲಾ ಪಟ್ಟುಗಳನ್ನು ಭೇದಿಸಿಕೊಂಡು ಪ್ರತಿ ಚುನಾವಣೆಯಲ್ಲಿ ಜಯಭೇರಿ ಬಾರಿಸುತ್ತಿರುವ ಸೋಲು ಕಂಡಿರದ ಸರದಾರ. ಇದು ಅವರ ಚುನಾವಣಾ ಪರಿಣತಿ ಮತ್ತು ಸ್ಥಿರತೆಯನ್ನು ಪ್ರತಿಬಿಂಬಿಸುತ್ತದೆ.

2002ರ ಗೋಧ್ರಾ ಗಲಭೆಯ ನಂತರ ನರೇಂದ್ರ ಮೋದಿ ಜನಾದೇಶಕ್ಕೆ ಸಜ್ಜಾಗುತ್ತಾರೆ. ಗುಜರಾತ್ ಬಗ್ಗೆ ರಾಜ್ಯದ ಒಳಗೆ ಮತ್ತು ಹೊರಗೆ ಜನರ ಮನಸ್ಸಿನಲ್ಲಿ ನೆಲೆ ನಿಂತಿದ್ದ ನಕಾರಾತ್ಮಕ ಚಿತ್ರಣವನ್ನು ಬದಲಿಸುವ ಇಂಗಿತದಿಂದ ಅಖಂಡ ಗುಜರಾತ್‌ನಲ್ಲಿ ಗುಜರಾತ್ ಗೌರವ್ ಯಾತ್ರೆ ಕೈಗೊಂಡರು. ಆ ಸಮಯದಲ್ಲಿ ಶಾ ಪಕ್ಷದಲ್ಲಿ ಹೊಂದಿದ ಬೇರುಮಟ್ಟದ ಕ್ರಿಯಾಶೀಲತೆ, ಸಾಂಸ್ಥಿಕ ಪರಿಣತಿ, ವಿಷಯದ ಆಳಕ್ಕಿದ್ದು ಅವಲೋಕಿಸುವ ತೀಕ್ಷ್ಣದೃಷ್ಟಿ, ರಾಜಕೀಯ ನಿರ್ವಹಣೆ ಮತ್ತು ಕುಗ್ಗದ ಶಕ್ತಿ ಅವರನ್ನು ಮೋದಿ ನಿಕಟವರ್ತಿಯನ್ನಾಗಿ ಮುಂಚೂಣಿಗೆ ತಂದು ನಿಲ್ಲಿಸಿತ್ತು. ಗೌರವ್ ಯಾತ್ರೆ ಯಶಸ್ಸಿನಿಂದ ಮತ್ತೆ ಗುಜರಾತ್‌ನಲ್ಲಿ ಕಮಲ ಅರಳಿಸಿತು ಈ ಜೋಡಿ.

ಗೃಹ ಸಚಿವರಾಗಿದ್ದಾಗ ಅವರು ಪೊಲೀಸ್ ಪಡೆಯನ್ನು ಆಧುನೀಕರಿಸಿದ ವ್ಯವಸ್ಥಿತ ಕ್ರಮವನ್ನು ಯಾರೂ ಮರೆಯುವಂತಿಲ್ಲ. ಪಾಕಿಸ್ತಾನಕ್ಕೆ ಬಹಳ ಹತ್ತಿರವಿರುವ ಗುಜರಾತ್‌ನಲ್ಲಿ ಭಯೋತ್ಪಾದನೆ ಸುಳಿಯದಂತೆ ನಿಗ್ರಹಿಸಲು, ವಿಶ್ವದಲ್ಲೇ ಮೊದಲೆನಿಸಿದ ಅತ್ಯಾಧುನಿಕ ವಿಧಿ ವಿಜ್ಞಾನ ವಿಶ್ವ ವಿದ್ಯಾಲಯವನ್ನು ಸ್ಥಾಪಿಸಿದರು. ತನಿಖಾ ವಿಜ್ಞಾನದ ಮತ್ತು ಆಂತರಿಕ ಭದ್ರತೆಯ ಅಧ್ಯಯನಕ್ಕೆ ಪೂರಕವಾಗುವಂಥ ಕೋರ್ಸ್‌ಗಳನ್ನು ಪ್ರಾರಂಭಿಸಿ, ಪದವಿ ನೀಡಲು ದೇಶದಲ್ಲೇ ಮೊದಲಬಾರಿಗೆ ರಕ್ಷಾ ಶಕ್ತಿ ವಿಶ್ವ ವಿದ್ಯಾಲಯವನ್ನು ಸ್ಥಾಪಿಸಿದ್ದು ಇವರ ಹೆಗ್ಗಳಿಕೆಗಳಲ್ಲಿ ಒಂದು. ಅಲ್ಲಿನ ಕಾರ್ಯಕ್ರಮಗಳಿಗೆ ಮಾರ್ಗದರ್ಶಕರಾಗಿದ್ದು ಭಾರತದ ಜೇಮ್ಸ್ ಬಾಂಡ್ ಖ್ಯಾತಿಯ ಅಜಿತ್ ದೋವಲ್. ಅಮಿತ್ ಶಾ ಗೃಹ ಸಚಿವರಾಗಿದ್ದ ಅವಧಿಯಲ್ಲಿ ದೀರ್ಘಕಾಲದ ಕರ್ಫ್ಯೂಗಳಾಗಲಿ ಅಥವಾ ಕೋಮು ಗಲಭೆ/ ಸಂಘರ್ಷಗಳಾಗಲಿ ನಡೆಯಲಿಲ್ಲ. ಅವರ ಅಧಿಕಾರಾವಧಿಯಲ್ಲಿ ನಡೆದ ಸ್ಮಾರ್ಟ್ ಪೊಲೀಸಿಂಗ್ ಅತಿ ಹೆಚ್ಚು ಜನಪ್ರಿಯತೆ ಮತ್ತು ಯಶಸ್ಸು ಕಂಡಿತು. ಅದನ್ನು ಭಾರತದ ಸರ್ವೋಚ್ಚ ನ್ಯಾಯಾಲಯ ಪ್ರಶಂಸಿದ್ದು ವಿಶೇಷ. ಅದಕ್ಕೆ ಉತ್ತಮ ಉದಾಹರಣೆ; 2007ರಲ್ಲಿ ರಾತ್ರೋರಾತ್ರಿ ಟಾಟಾ ತನ್ನ ಉತ್ಪಾದನಾ ಘಟಕವನ್ನು ಪೂರ್ವದಿಂದ ಪಶ್ಚಿಮಕ್ಕೆ ಸ್ಥಳಾಂತರಿಸಿದ್ದು. ಈ ನಿರ್ಣಯವನ್ನು ಗುಜರಾತ್ ರೈತರು ಮತ್ತು ಸಂಘಟನೆಗಳು ಸ್ವಾಗತಿಸಿದ್ದವು. ಆ ನಿಟ್ಟಿನಲ್ಲಿ ಗುಜರಾತ್‌ನ ಭೂ ಸ್ವಾಧೀನ ಪ್ರಕ್ರಿಯೆ ದೇಶಕ್ಕೆ ಮಾದರಿಯಾಗಿದ್ದು ಸುಳ್ಳಲ್ಲ.

2010 – 2012 ಅಮಿತ್ ಶಾ ರಾಜಕೀಯ ಜೀವನದ ಅತ್ಯಂತ ಸವಾಲಿನ ವರ್ಷಗಳು. ಸೋನಿಯಾಗಾಂಧಿ ನಿಯಂತ್ರಣದಲ್ಲಿದ್ದ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರ ಗುಜರಾತ್‌ನಲ್ಲಿ ತನ್ನ ಬೇಳೆ ಬೇಯಿಸಿಕೊಳ್ಳಲು ಶಾ ವಿರುದ್ಧ ನಕಲಿ ಎನ್‌ಕೌಂಟರ್ ಆರೋಪ ಹೊರಿಸಿತು. 5 ರಾಜ್ಯದ ಪೊಲೀಸರಿಗೆ ಬೇಕಿದ್ದ ಪಾತಕಿ ಸೊಹ್ರಾಬುದ್ದೀನ್ ಶೇಖ್ ಎನ್‌ಕೌಂಟರ್ ಆಯಿತು. ಇದು ನಕಲಿ ಎನ್‌ಕೌಂಟರ್ ಎಂದು ಆರೋಪಿಸಲಾಯಿತು. ಜುಲೈ 2010ರಲ್ಲಿ ಸಿಬಿಐ ಚಾರ್ಜ್‌ಶೀಟ್ ಸಲ್ಲಿಸಿತ್ತು. ಶಾ ಗೃಹ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಅವರನ್ನು 90 ದಿನಗಳ ಜೈಲು ಶಿಕ್ಷೆಗೆ ಗುರಿ ಪಡಿಸಲಾಯಿತು. ಜಾಮೀನಿನ ಮೇಲೆ ಬಿಡುಗಡೆಯಾದರು. ನ್ಯಾಯಾಲಯ ಗುಜರಾತಿಗೆ ಕಾಲಿಡದಂತೆ ನಿಬಂಧನೆ ಹೇರಿತ್ತು. ಅಮಿತ್ ಶಾ ದೆಹಲಿ ಸೇರಿದರು. 2 ವರ್ಷ ದೆಹಲಿಯಲ್ಲಿದ್ದ ಅಮಿತ್ ಶಾ ಹೆಚ್ಚಾಗಿ ಅಧ್ಯಾತ್ಮಿಕ ಅಧ್ಯಯನದಲ್ಲಿ ನಿರತರಾಗಿದ್ದರೂ, ದೆಹಲಿ ಗದ್ದುಗೆಯ ಮೇಲೆ ಕಣ್ಣಿಡಲು ಆರಂಭಿಸಿದ್ದ ಮಾತ್ರ ನಿಜ. ಶಾ ಲೆಕ್ಕಾಚಾರ ಸುಳ್ಳಾಗಲಿಲ್ಲ 2014ರಲ್ಲಿ ಸಿಬಿಐ ನ್ಯಾಯಾಲಯ ಅವರ ವಿರುದ್ಧ ದಾಖಲಾಗಿದ್ದ ಎಲ್ಲಾ ಪ್ರಕರಣಗಳು ರಾಜಕೀಯ ಪ್ರೇರಿತವೆಂದು ಕೇಸಿನಿಂದ ಖುಲಾಸೆ ಮಾಡಿತು. ಪಕ್ಷ ಅವರಿಗೆ ಗುಜರಾತ್, ದೆಹಲಿ ಅಥವಾ ಬೇರೆ ಯಾವುದೇ ರಾಜ್ಯದಲ್ಲಿ ಕೆಲಸ ಮಾಡಲು ಮುಕ್ತ ಅವಕಾಶ ನೀಡಿತು. ಆದರೆ ರಾಷ್ಟ್ರ ರಾಜಕಾರಣದ ಮೇಲೆ ದೃಷ್ಟಿ ನೆಟ್ಟಿದ್ದ ಶಾ, ದೆಹಲಿ ಗದ್ದುಗೆ ಬಲಪಡಿಸಲು ದೆಹಲಿಯನ್ನು ಅಖಾಡ ಮಾಡಿಕೊಂಡರು.

2014ರ ಜುಲೈನಲ್ಲಿ, ಬೂತ್ ಮಟ್ಟದಿಂದ ಬಂದ 49 ವರ್ಷದ ಕಾರ್ಯಕರ್ತ ದೇಶದ ಅವತ್ತಿನ ಎರಡನೇ ಅತಿ ದೊಡ್ಡ ಪಕ್ಷದ ರಾಷ್ಟ್ರೀಯ ಅಧ್ಯಕ್ಷನಾಗಿ ಆಯ್ಕೆಯಾಗಿದ್ದು, ತದನಂತರ ನಡೆದಿದ್ದೆಲ್ಲವು ಮೈಲುಗಲ್ಲೇ..!

ಇಂದು ಅಮಿತ್ ಶಾ ಜನ್ಮದಿನ.

ಹತ್ತರಿಂದ ಹತ್ತು ಕೋಟಿಯ ಪಯಣ. 1951ರಲ್ಲಿ ಕೇವಲ ಹತ್ತು ಜನರಿಂದ ಸ್ಥಾಪಿಸಲ್ಪಟ್ಟ ಭಾರತದ ರಾಜಕೀಯ ಪಕ್ಷ, ಅಮಿತ್ ಶಾ ಅಧಿಕಾರವಹಿಸಿಕೊಂಡ ನಂತರ ಪ್ರಪಂಚದ ಅತಿ ದೊಡ್ಡ ಪಕ್ಷವಾಗಿ ಬೆಳೆದ ರೀತಿ ಊಹಿಸಲು ಅಸಾಧ್ಯ. 2015ರಲ್ಲಿ ಚೀನಾದ ಕಮ್ಯೂನಿಸ್ಟ್ ಪಾರ್ಟಿಯೇ ಅತ್ಯಂತ ದೊಡ್ಡ ಪಕ್ಷವಾಗಿತ್ತು. ಆದರೆ ಬಿಜೆಪಿ ಅತಿ ಕಡಿಮೆ ಅವಧಿಯಲ್ಲಿ ಕಮ್ಯೂನಿಸ್ಟ್ ಪಾರ್ಟಿಯನ್ನ ಹಿಂದಿಕ್ಕಿ ಮುನ್ನುಗ್ಗಿತ್ತು. ಇದು ಭಾರತೀಯ ರಾಜಕೀಯ ಪಕ್ಷಗಳ ಇತಿಹಾಸದಲ್ಲಿ ಅಭೂತಪೂರ್ವ ಮೈಲುಗಲ್ಲು, ತಂತ್ರಜ್ಞಾನ ಮತ್ತು ಅಂಕಿ – ಸಂಖ್ಯೆಗೆ ಹೆಚ್ಚು ಒತ್ತುಕೊಡುವ ಶಾ, ಅಧಿಕಾರವಹಿಸಿಕೊಂಡ ನಂತರ ಎರಡು ಪ್ರಮುಖ ತಿದ್ದುಪಡಿಯನ್ನು ಮಾಡಿದರು. ತಂತ್ರಜ್ಞಾನವನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸಿಕೊಂಡು ಸದಸ್ಯತ್ವ ಅಭಿಯಾನಕ್ಕೆ ಚಾಲನೆ ಮತ್ತು ಮೊಬೈಲ್ ಆಧಾರಿತ ಸದಸ್ಯತ್ವ ನೋಂದಣಿ. ಬಿಜೆಪಿ ಜನಸಂಘದಿಂದ ಅನುವಂಶಿಕವಾಗಿ ಪಡೆದ ಒಂದು ಪರಂಪರೆಯೆಂದರೆ; ತನ್ನ ಮತದಾರರನ್ನು ಪಕ್ಷದ ಸದಸ್ಯರನ್ನಾಗಿಸುವುದು. ಈ ವಾದವನ್ನು ಮತ್ತು ಪರಿವರ್ತನೆಯನ್ನು ಪಂಡಿತ್ ದೀನ್‌ದಯಾಳ್ ಉಪಾಧ್ಯಾಯರು ಪ್ರತಿಪಾದಿಸುತ್ತಿದ್ದರು. ಅವರು ಹೇಳುತ್ತಿದ್ದದ್ದು; ಇಂದಿನ ಎದುರಾಳಿಗಳು ನಮ್ಮ ನಾಳಿನ ಮತದಾರನಾಗಿರಬೇಕು, ನಾಳೆಯ ಮತದಾರರು ಮುಂದಿನ ನಮ್ಮ ಸದಸ್ಯರಾಗಿರಬೇಕು. ಆ ಸದಸ್ಯರು ಮುಂದಿನ ದಿನಗಳಲ್ಲಿ ಸಕ್ರಿಯ ಕಾರ್ಯಕರ್ತರಾಗಿ ರೂಪಾಂತರಗೊಳ್ಳಬೇಕು.

ನಾನಾಜಿ ದೇಶಮುಖ್‌ರ ಗರಡಿಯಲ್ಲಿ ಪಳಗಿದ ಅಮಿತ್ ಶಾ ಉಪಾಧ್ಯಾಯರು ಪ್ರತಿಪಾದಿಸಿದ ನಿಯಮವನ್ನೇ ನಂಬಿದರು. ಶಾ ಪ್ರಾಥಮಿಕವಾಗಿ ಪ್ರತಿರಾಜ್ಯದಲ್ಲಿರುವ ಸದಸ್ಯರ ಸಂಖ್ಯೆ ಮತ್ತು ಕಳೆದ ಬಾರಿಯ ಚುನಾವಣೆಯಲ್ಲಿ ಪಕ್ಷ ಪಡೆದ ಮತಗಳ ಅಂತರದಿಂದ ನಿರ್ಣಯ ಕೈಗೊಳ್ಳುತ್ತಿದ್ದರು. ಪ್ರತಿರಾಜ್ಯದಲ್ಲೂ ಗಳಿಸಿದ ಮತಕ್ಕಿಂತ ಸದಸ್ಯರ ಸಂಖ್ಯೆ ಕಡಿಮೆ ಇರುವ ಮಾಹಿತಿ ಸವಾಲಾಗಿ ಎದುರಾಯಿತು. ಪ್ರತಿಯೊಬ್ಬ ಸಕ್ರಿಯ ಕಾರ್ಯಕರ್ತನಿಗೆ ಕನಿಷ್ಠ ನೂರು ಜನರನ್ನು ಸದಸ್ಯರನ್ನಾಗಿ ಮಾಡಲು ಸೂಚಿಸಿದರು. ಜತೆಗೆ ವರ್ಷದಲ್ಲಿ 7 ದಿನ ಪಕ್ಷದ ಕೆಲಸಕ್ಕೆ ಮೀಸಲಿಡುವಂತೆ ಸೂಚಿಸಿದರು.

ಅಮಿತ್ ಶಾ ತಮ್ಮ ಪ್ರತಿಯೊಂದು ರಾಜಕೀಯ ತಂತ್ರಗಳನ್ನು ವಿಶ್ವಾಸಾರ್ಹ ಮಾಹಿತಿಯ ಆಧಾರದಲ್ಲಿ ಹೆಣೆಯುತ್ತಾರೆ. ಎದುರಾಳಿಗಳು ಅದನ್ನು ರಾಜಕೀಯದ ಗಿಮಿಕ್ ಎಂದು ಕರೆಯುವುದುಂಟು. ಆದರೂ ಟೀಕೆಗಳ ಹೊರತಾಗಿ ಅಮಿತ್ ಶಾ ತನ್ನ ತಂತ್ರಗಳು ಸರಿ ಇವೆಯೆಂದು ಮತ್ತೆ ಮತ್ತೆ ಸಾಬೀತುಪಡಿಸಿದ್ದಾರೆ. ಈ ಸದಸ್ಯತ್ವ ಅಭಿಯಾನ ಬೂತ್ ಮಟ್ಟದಲ್ಲಿ ಪಕ್ಷವನ್ನು ಗಟ್ಟಿಗೊಳಿಸಿತು. ಪರಿಣಾಮ ಬಿಜೆಪಿ ತನ್ನ ಸಂಪ್ರದಾಯಿಕ ಮತವನ್ನು ತನ್ನಲ್ಲೇ ಉಳಿಸಿಕೊಂಡು, ಒಂದೊಂದೇ ರಾಜ್ಯವನ್ನು ತನ್ನ ತೆಕ್ಕೆಗೆ ಹಾಕಿಕೊಳ್ಳಲು ಪ್ರಾರಂಭಿಸಿತ್ತು. ಮುಖ್ಯವಾಗಿ 2019ರ ನರೇಂದ್ರ ಮೋದಿಯವರ ಪ್ರಚಂಡ ಜಯಭೇರಿಯ ಯಶಸ್ಸಿನ ಒಳಗುಟ್ಟು ಇದಾಗಿತ್ತು. ಸಂವಾದಕ್ಕೆ ಮತ್ತು ಪಕ್ಷಕ್ಕೆ ಆಧುನಿಕತೆಯ ಸ್ಪರ್ಶ ಭಾರತೀಯ ರಾಜಕೀಯ ಇತಿಹಾಸವನ್ನು ಅವಲೋಕಿಸಿದ್ದರೆ ಜನಪ್ರಿಯ ನಾಯಕರು ತಮ್ಮ ವಿಚಾರಧಾರೆಯನ್ನು ನಿರೂಪಿಸಲು ಸಂವಾದಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡ ಕುರುಹುಗಳಿವೆ. ಅಷ್ಟೇ ಏಕೆ, ಆಧುನಿಕ ಭಾರತದ ಶ್ರೇಷ್ಠ ಸಂವಹನಕಾರರಾಗಿದ್ದ ಮಹಾತ್ಮ ಗಾಂಧೀಜಿ ತಮ್ಮ ಸಾರ್ವಜನಿಕ ಸಭೆಗಳಲ್ಲಿ ಸಂವಾದವನ್ನು ನಡೆಸಿರುವ ಉದಾಹರಣೆಗಳಿವೆ. ಇದೇ ತಂತ್ರವನ್ನು ಅಮಿತ್ ಶಾ ಹೆಚ್ಚು ಪರಿಣಾಮಕಾರಿಯಾಗಿ ಮತ್ತು ಕ್ರಿಯಾತ್ಮಕವಾಗಿ, ಕಾರ್ಯಕ್ರಮಗಳಿಗೆ ಆಧುನೀಕತೆಯ ಸ್ಪರ್ಶ ನೀಡಿ ಯಶಸ್ವಿಗೊಳಿಸಿದ್ದರು. ದೇಶಾದ್ಯಂತ ಸಾಮಾಜಿಕ ಸಲಹೆಗಾರರು ಮತ್ತು ಸುಧಾರಕರನ್ನು ಭೇಟಿಮಾಡಿ ಸಂವಾದಗಳು ಹೆಚ್ಚು ಮುಕ್ತವಾಗಿ ಪಸರಿಸುವಂತೆ ಮಾಡಿದ್ದು ಮತಗಳಾಗಿ ಪರಿವರ್ತನೆಯಾದವು. 2014ರಲ್ಲಿ ಪಕ್ಷ ಅಧಿಕಾರಕ್ಕೆ ಬಂದ ನಂತರ ಈ ಸಂವಾದ ಕಾರ್ಯಕ್ರಮಗಳನ್ನು ನಿಲ್ಲಿಸದೆ, ಸಹೋಗ್ ಎಂಬ ವಿಭಾಗದೊಂದಿಗೆ ನಿರಂತರವಾಗಿ ಮುಂದುವರಿಯುವಂತೆ ನೋಡಿಕೊಂಡರು. ಪ್ರತಿದಿನ ಕೇಂದ್ರದ ಒಬ್ಬ ಮಂತ್ರಿ ಪಕ್ಷದ ಕೇಂದ್ರ ಕಚೇರಿಯಲ್ಲಿ ಜನರ ಸಮಸ್ಯೆಗೆ ಕಿವಿಕೊಟ್ಟು ಸಹಾಯ ಹಸ್ತ ಚಾಚುವಂತೆ ನಿರ್ದೇಶನ ನೀಡಿದ್ದು ಇದೇ ಚಾಣಕ್ಯ.

ಅಟಲ್ ಬಿಹಾರಿ ವಾಜಪೇಯಿ, ಬಿಜೆಪಿಯ ಭೀಷ್ಮ ಅಡ್ವಾಣಿ, ಸುಷ್ಮ ಸ್ವರಾಜ್, ಪ್ರಮೋದ್ ಮಹಾಜನ್ ಹೀಗೆ ಹಲವರು ಪ್ರಚಂಡ ಸಂವಹನಕಾರರು ಜತೆಗೆ ಸಂವಾದಕಾರರು ಬಿಜೆಪಿಯ ಆಸ್ತಿ. ಈ ಸಾಮರ್ಥ್ಯ ಕಾಂಗ್ರೆಸ್ ನಾಯಕರಲ್ಲಿ ತೀರಾ ಕಡಿಮೆ. ಪ್ರಧಾನಿ ಅಭ್ಯರ್ಥಿ ರಾಹುಲ್ ಗಾಂಧಿಯಂತೂ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ, ಸಾರ್ವಜನಿಕರು ಕೇಳುವ ಪ್ರಶ್ನೆಗಳಿಗೆ ಉತ್ತರಿಸಲಾಗದೇ ಮುಖಭಂಗ ಅನುಭವಿಸಿರುವ ಘಟನೆಗಳ ಬಗ್ಗೆ ಒಂದು ಪುಸ್ತಕ ಬರೆಯುವಷ್ಟು ಸರಕು ಲಭ್ಯವಿದೆ. ವಿರೋಧಿ ಬಣದ ಋಣಾತ್ಮಕ ಅಂಶವನ್ನೇ ಬಂಡವಾಳ ಮಾಡಿಕೊಂಡು ಸಂಪ್ರದಾಯಿಕ ಸಂವಾದವನ್ನು ಅತ್ಯುತ್ತಮವಾಗಿ ಮರುಶೋಧಿಸಿ ತಂತ್ರವಾಗಿಸಿದ ಪೂರ್ಣ ಕ್ರೆಡಿಟ್ ಸಲ್ಲುವುದು ಅಮಿತ್ ಶಾ ಅವರಿಗೆ ಮಾತ್ರ.!

ಶಾ ಅಧಿಕಾರವಹಿಸಿಕೊಳ್ಳುವ ಮೊದಲು ಬಿಜೆಪಿಯಲ್ಲಿ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಸುಮಾರು 50ಕ್ಕೂ ಹೆಚ್ಚು ಮೋರ್ಚಾಗಳಿದ್ದವು. ಹಲವು ನಿಷ್ಕ್ರೀಯವಾಗಿದ್ದವು. ಶಾ ಬಿಜೆಪಿ ರಚನೆಯನ್ನು ಎರಡು ಭಾಗಗಳಾಗಿ ಮರುವಿನ್ಯಾಸಗೊಳಿಸಿದ್ದರು. ಒಂದು ವಿಭಾಗಗಳು ಮತ್ತು ಎರಡು ಯೋಜನೆಗಳು. ಸಕ್ರಿಯವಾಗಿರುವ ಯೋಜನೆಗಳಿಗೆ ಬೆನ್ನೆಲುಬಾಗಿ ವಿಭಾಗಗಳನ್ನು ರಚಿಸಲಾಯಿತು. ಸದ್ಯ 19 ವಿಭಾಗಗಳು ಮತ್ತು 10 ಯೋಜನೆಗಳು ಸಕ್ರಿಯವಾಗಿದೆ. ವಿಭಾಗಗಳ ವಿನ್ಯಾಸದಲ್ಲೂ ಕಾರ್ಪೊರೇಟ್ ಪರಿಕಲ್ಪನೆಯನ್ನು ಅನುಸರಿಸಿದ್ದು ವಿಶೇಷ. ಹಳೆಯ ಬೇರಿನ ಸಾರಗಳನ್ನೇ ಉಳಿಸಿಕೊಂಡು ಪಕ್ಷವನ್ನು ಆಧುನೀಕರಿಸಿದ್ದು ಚುನಾವಣಾ ಫಲಿತಾಂಶಗಳ ಮೇಲೆ ಗುಣಾತ್ಮಕ ಪರಿಣಾಮಗಳನ್ನು ಬೀರಲು ಪ್ರಾರಂಭಿಸಿದ್ದವು. ದೇವೇಗೌಡರ ರೀತಿ ರಾಜಕೀಯ ಅಮಿತ್ ಶಾಗೆ ಪೂರ್ಣಾವಧಿಯ ಕಸುಬು. ಇತರ ಪಕ್ಷಗಳ ನಾಯಕರಂತೆ ಚುನಾವಣಾ ಸಮಯದಲ್ಲಿ ಮಾತ್ರ ಸಕ್ರಿಯವಾಗಿ, ಫಲಿತಾಂಶದ ನಂತರ ಮಾಯ ವಾಗುವುದು ಅವರಿಗೆ ಸಿದ್ಧಿಸಿಲ್ಲ. ಕಾಂಗ್ರೆಸ್ ಯುವರಾಜ ಪ್ರತಿ ಚುನಾವಣೆಯಲ್ಲೂ ಪ್ರಚಾರದ ನಂತರ ಕಣ್ಮರೆಯಾಗಿ, ಮತ್ತೆ ಪ್ರತ್ಯಕ್ಷವಾಗುವುದು ಮುಂದಿನ ಚುನಾವಣೆಯಲ್ಲೇ. ಇದಕ್ಕೇ ವ್ಯತಿರಿಕ್ತ ಗುಣ ಅಮಿತ್ ಶಾ ರಲ್ಲಿದೆ. ಚುನಾವಣೆಯ ಫಲಿತಾಂಶಗಳು ಪಕ್ಷಕ್ಕೆ ಅನುಕೂಲವಾಗಲಿ ಅಥವಾ ಅನಾನುಕೂಲವಾಗಲಿ ಸ್ಥಳೀಯ ಕಾರ್ಯಕರ್ತರೊಂದಿಗೆ ನಿರಂತರ ಸಂಪರ್ಕದಲ್ಲಿರುತ್ತಾರೆ. ಈ ವಿಭಿನ್ನ ನಡೆಯಿಂದ ಬೇರುಮಟ್ಟದ ಕಾರ್ಯಕರ್ತರು ಸಕ್ರಿಯ ವಾಗಿರಲು ಸಹಾಯವಾಗಿದೆ. ಈ ಚಲನಶೀಲತೆ ಯಿಂದಲೇ ಚುನಾವಣೆಗಳು ಯಾವ ಸಮಯದಲ್ಲೇ ಘೋಷಣೆಯಾಗಲಿ ಅಖಾಡಕ್ಕೆ ಧುಮುಕಿ ತಂತ್ರಗಳನ್ನು ಹೆಣೆದು ಎದುರಾಳಿಗಳನ್ನು ಚಿತ್ತು ಮಾಡಿ ಅವರ ತೊಡೆ ನಡುಗಿಸುವುದರಲ್ಲಿ ನಿಸ್ಸೀಮ. ಇವರ ಕಾರ್ಯತಂತ್ರಗಳು ಒಂದು ರೀತಿಯ ready to eat ಆಹಾರದವಿದ್ದಂತೆ. ಮುಂದೆ ಉತ್ತರಪ್ರದೇಶ, ಬಿಹಾರ ಇತರ ರಾಜ್ಯಗಳ ಚುನಾವಣೆಗಳಲ್ಲಿ ಈ ಚಾಣಕ್ಯ ಯಾವ ಅಸ್ತ್ರ ಪ್ರಯೋಗಿಸುತ್ತಾರೋ ಕಾದು ನೋಡಬೇಕು..!

ಗ್ರಾಮ ಪಂಚಾಯತ್ ಚುನಾವಣೆ ಎಂದು?

ಅಭಿಮತ

ಸಂದೀಪ್ ಶರ್ಮಾ

mooteri.sandeepsharma@gmail.com

ನವೆಂಬರ್ 3ರಂದು ರಾಜರಾಜೇಶ್ವರಿ ನಗರ ಹಾಗೂ ಶಿರಾ ಕ್ಷೇತ್ರದಲ್ಲಿ ಉಪಚುನಾವಣೆ ನಡೆಯಲಿದೆ. ಆದರೆ ನಿರೀಕ್ಷೆಯಂತೆ ಕೋವಿಡ್ ಸಂದರ್ಭದ ನೆಪವೊಡ್ಡಿ ಗ್ರಾಮ ಪಂಚಾಯತ್ ಚುನಾವಣೆಗಳನ್ನು ಮುಂದೂಡುವಂತೆ ಕೋರಿ ರಾಜ್ಯ ಸರಕಾರ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದೆ. ವಿರೋಧ ಪಕ್ಷಗಳು ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳು ಸಹ ಚುನಾವಣೆ ಮುಂದೂಡಿಕೆಗೆ ದನಿಗೂಡಿಸಿವೆ. ಗ್ರಾಮೀಣ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿವೆ, ಕರೋನಾ ಮಹಾಮಾರಿಯ ನೆಪದಿಂದಾಗಿ ಯೋಜನೆಗಳೆಲ್ಲವೂ ಹಳ್ಳಹಿಡಿದಿವೆ.

ಕೆಲತಿಂಗಳುಗಳ ಹಿಂದೆ ಕಾಂಗ್ರೆಸ್ ಪಕ್ಷದವರು ಚುನಾವಣೆ ನಡೆಸಬೇಕು ಎಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಮೂಲಕ ಹೈಕೋರ್ಟ್ ಮೊರೆ ಹೋಗಿದ್ದರು. ಇದೀಗ ತಮ್ಮ ವರಸೆಯನ್ನು ಮತ್ತೊಂದು ದಿಕ್ಕಿನತ್ತ ಒಯ್ಯುತ್ತಿದ್ದಾರೆ ಹಾಗೂ ಗ್ರಾಮ ಪಂಚಾಯತ್ ಚುನಾವಣೆಯನ್ನು ಮುಂದೂಡಲು ಆಯೋಗಕ್ಕೆ ಮನವಿ ಮಾಡಿದೆ. ಗ್ರಾಮ ಪಂಚಾಯತ್ ಚುನಾವಣೆ ನಡೆಸಲು ಎಲ್ಲ ರೀತಿಯ ಸಿದ್ಧತೆ ನಡೆಸಿ ಸಜ್ಜಾಗಿದ್ದ ಚುನಾವಣಾ ಆಯೋಗವೂ ಮುಂದೂಡಿಕೆ ಸಾಧ್ಯವಿಲ್ಲ ಎಂದು ಹೈಕೋರ್ಟ್‌ಗೆ ಸ್ಪಷ್ಟವಾಗಿ ತಿಳಿಸಿದೆ. ಕೇಂದ್ರ ಸರಕಾರ ಚುನಾವಣೆ ನಡೆಸುವ ಸಂಬಂಧ ನೀಡಲಾಗಿರುವ ಮಾರ್ಗದರ್ಶಿಗಳನ್ನೂ ಸೂಕ್ತವಾಗಿ ಪಾಲಿಸಲು ಸಿದ್ಧರಿದ್ದೇವೆ ಎಂದು ಈ ಹಿಂದೆಯೇ ಆಯೋಗ ಸ್ಪಷ್ಟವಾಗಿ ಹೇಳಿದೆಯಾದರೂ ರಾಜ್ಯ ಸರಕಾರ ಮನಸ್ಸು ಮಾಡುತ್ತಿಲ್ಲ.

ಗ್ರಾಮ ಪಂಚಾಯತ್‌ಗಳ ವಿಕೇಂದ್ರೀಕರಣವಾಗಿ, ಅದರ ಅವಧಿ ಮುಗಿದು ಐದಾರು ತಿಂಗಳು ಕಳೆದರೂ ಚುನಾವಣೆ ನಡೆದಿಲ್ಲ. ಕರೋನಾ ಹಿನ್ನೆಲೆಯಲ್ಲಿ ಚುನಾವಣೆ ಬೇಡ ಎಂಬುದು ಸರಕಾರ ಹಾಗೂ ರಾಜಕೀಯ ಪಕ್ಷಗಳು ತಮ್ಮ ವಾದಗಳನ್ನು ಮಂಡಿಸುತ್ತಲೇ ಇವೆ. ಆದರೆ ರಾಜ್ಯದಲ್ಲಿ ಎರಡು ವಿಧಾನಸಭೆ ಕ್ಷೇತ್ರಗಳ ಉಪ ಚುನಾವಣೆ, ವಿಧಾನ ಪರಿಷತ್ ನಾಲ್ಕು ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದೆ. ಇದಕ್ಕೆ ಅವಕಾಶ ಕೊಟ್ಟಿರುವಾಗ ಗ್ರಾಮ ಪಂಚಾಯತ್ ಚುನಾವಣೆ ಯಾಕೆ ಬೇಡ ಎಂಬುದು ಗ್ರಾಮೀಣ ಭಾಗದ ಜನರ ಅಳಲು. ರಾಜ್ಯವ್ಯಾಪಿ ಚುನಾವಣೆ ನಡೆಸುವಾಗ ಗ್ರಾಮಗಳ ಚುನಾವಣೆ ನಡೆಸುವುದು ಕಷ್ಟವೇನಲ್ಲ ಎಂಬ ಅಭಿಪ್ರಾಯವೂ ಕೇಳಿಬರುತ್ತಿದೆ. ಅಷ್ಟೇ ಅಲ್ಲದೆ ದೇಶದ ಉತ್ತರ ಭಾರತದಲ್ಲಿನ ಬಿಹಾರದಲ್ಲಿ ವಿಧಾನಸಭೆ ಚುನಾವಣೆಯನ್ನೇ ನಡೆಸಲಾಗುತ್ತಿದೆ.

ಈ ಮೊದಲು ಚುನಾವಣೆ ನಡೆಸಲು ನಾವು ತಯಾರಿದ್ದೇವೆ ಎಂದು ಹೇಳುತ್ತಲೇ ಚುನಾವಣೆ ಮುಂದೂಡಿಕೆಗೆ ಆಯೋಗಕ್ಕೆ ಪತ್ರ ಬರೆದಿರುವ ಸರಕಾರದ ನಿಲುವು ಅನುಮಾನಕ್ಕೆ ಕಾರಣವಾಗಿದೆ. ಹಾಗೂ ಕಾರ್ಯವೈಖರಿಯು ಹಾಸ್ಯಾಸ್ಪದವಾಗಿದೆ. ಗ್ರಾಮ ಪಂಚಾಯತ್ ಚುನಾವಣೆ ಯಾಕೆ ನಡೆಸುತ್ತಿಲ್ಲ ಎಂದು ಗ್ರಾಮೀಣ ಭಾಗದ ಜನರು ಜನಪ್ರತಿನಿಧಿಗಳನ್ನು ಪ್ರಶ್ನಿಸುತ್ತಿದ್ದಾರೆ. ಗ್ರಾಮ ಪಂಚಾಯತ್‌ಗೆ ಚುನಾವಣೆ ನಡೆದರೆ ಅಭಿವೃದ್ಧಿ ಯೋಜನೆಗಳಿಗೂ ವೇಗ ಸಿಗುತ್ತದೆ ಮತ್ತು ಜನರ ಮನೋಬಲವು ಹೆಚ್ಚುತ್ತದೆ. ರಾಜಕೀಯ ಧುರೀಣರು ಇಲ್ಲದಿದ್ದರೆ ಸ್ಥಳೀಯ ಆಡಳಿತ ವ್ಯವಸ್ಥೆ ಇಲ್ಲದೇ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಕಷ್ಟವಾಗುತ್ತದೆ ಎಂದು ಸರಕಾರ ತಿಳಿದುಕೊಳ್ಳಬೇಕಿದೆ.

ಪ್ರತಿ ಗ್ರಾಮಕ್ಕೂ ಹಾಗೂ ಹಳ್ಳಿ ಹಳ್ಳಿಗಳಿಗೆ ಕರೋನಾ ವೈರಸ್ ಸೋಂಕು ಹರಡುತ್ತಿದೆ. ಇಂತಹ ಸನ್ನಿವೇಶದಲ್ಲಿ ಕರೋನಾ ನಿಯಂತ್ರಣ ಮತ್ತು ಜನರಲ್ಲಿ ಜಾಗೃತಿ ಮೂಡಿಸಲು ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳಿದ್ದರೆ ಕೊಂಚ ನೆಮ್ಮದಿ ಇರುತ್ತಿತ್ತು ಎಂಬುದು ಜನರ ಅಭಿಪ್ರಾಯ. ಈ ನಿಟ್ಟಿನಲ್ಲಾದರೂ ಸರಕಾರ ಗ್ರಾಮ ಪಂಚಾಯತ್‌ಗಳಿಗೆ ಚುನಾವಣೆ ನಡೆಸಬಹುದಿತ್ತು. ಈ ನಡುವೆ, ಆಡಳಿತಾಧಿಕಾರಿಗಳ ಅವಧಿಯಲ್ಲಿ ಬಹುತೇಕ ಕಡೆಗಳಲ್ಲಿ ಗ್ರಾಮ ಸಭೆಗಳೇ ನಡೆದಿಲ್ಲ, ಗ್ರಾಮಸಭೆಗಳು ನಡೆಯದಿದ್ದರೆ ಸರಕಾರದ ಯೋಜನೆಗಳಿಗೆ ಫಲಾನುಭವಿಗಳ ಆಯ್ಕೆಯೂ ಕಷ್ಟವಾಗುತ್ತಿದೆ. ಇಷ್ಟೆಲ್ಲ ವಾಸ್ತವ ಸಂಗತಿಗಳು ಇದ್ದರೂ ಸರಕಾರ ಗ್ರಾಮ ಪಂಚಾಯತ್ ಚುನಾವಣೆ ನಡೆಸಲು ಗಮನ ಹರಿಸದಿರಲು ವಿಷಾದನೀಯ. ಚುನಾವಣಾ ಆಯೋಗವು ರಾಜ್ಯ ಸರಕಾರವನ್ನು ಗ್ರಾಮ ಪಂಚಾಯತ್ ಚುನಾವಣೆಯನ್ನು ನಡೆಸಲು ಮತ್ತಷ್ಟು ಒತ್ತಡವನ್ನು ಹೇರಿ ಕೇಂದ್ರದ ಗಮನಕ್ಕೆ ತರಬೇಕು ಹಾಗೂ ಚುನಾವಣೆಯನ್ನು ನಡೆಸಬೇಕು, ಗ್ರಾಮೀಣ ಭಾಗವು ಅಭಿವೃದ್ಧಿ ಹೊಂದಬೇಕು.

ಭಟ್ಟರ್ ಸ್ಕಾಚ್

- **ವೀಣಾ ಸಂಕೇತ, ಬೆಂಗಳೂರು**
ಮೈಮರೆತರೆ ಕರೋನಾ ತಟ್ಟದೇ ಬಿಡುವುದಿಲ್ಲ ಎಂದು ಪ್ರಧಾನಿ ಹೇಳಿದ್ದಾರಲ್ಲ?
– ಮೈಮರೆತರೆ ಅನ್ನೋ ಬದಲು ಮಾಸ್ಕ್ ಮರೆತರೆ ಎಂದು ಹೇಳಬಹುದಿತ್ತೇನೋ ?!

- **ವಸಂತ ಬಣಕಾರ, ಹುಬ್ಬಳ್ಳಿ**
ಭಟ್ರೇ, ಯಡಿಯೂರಪ್ಪ ಅಧಿಕಾರ ಹೆಚ್ಚು ದಿನ ಇಲ್ಲ ಅಂತ ಯತ್ನಾಳ ಹೇಳಿದ್ದಾರಲ್ಲ?
– ಇಷ್ಟು ದಿನ ಯತ್ನಾಳ, ಮೋದಿ ವಿರುದ್ಧ ಯಾಕೆ ಮಾತಾಡಿಲ್ಲ ಅನ್ನೋದೇ ಆಶ್ಚರ್ಯ !

- **ಸತೀಶ ಗೌಡ, ಮಳವಳ್ಳಿ**
ಡಿಕೆಶಿ ನಿಜವಾದ ಮೀರ್ ಸಾದಿಕ್ ಎಂದು ಡಿಸಿಎಂ ಅಶ್ವಥನಾರಾಯಣ ಹೇಳಿದ್ದಾರಲ್ಲ ?
– ಡಿಕೆಶಿ ಯಾವಾಗ ಇಸ್ಲಾಂಗೆ ಮತಾಂತರವಾದರು ಎಂದು ರೇಣುಕಾಚಾರ್ಯ ಕೇಳಬೇಕೆ?!

- **ಸುರೇಂದ್ರ ನಾಯಕ, ಮೈಸೂರು**
ಭಟ್ರೇ, ಹದಿನಾಲ್ಕು ತಿಂಗಳ ಅಧಿಕಾರದ ಅವಧಿಯಲ್ಲಿ ಚಿತ್ರಹಿಂಸೆ ಅನುಭವಿಸಿದೆ ಎಂದು ಕುಮಾರಸ್ವಾಮಿ ಹೇಳಿದ್ದಾರಲ್ಲ?
– ಮೂವತ್ತೈದು ಮತ್ತು ಎರಡು ಜನ ಶಾಸಕರನ್ನಿಟ್ಟುಕೊಂಡು ನಮ್ಮ ಪಕ್ಷದ ಬೆಂಬಲದಿಂದ ಹದಿನಾಲ್ಕು ತಿಂಗಳು ಮಜಾ ಮಾಡಿ ಹೋದರು ಎಂದ್ರಂತೆ ಸಿದ್ದರಾಮಯ್ಯ!

- **ಕನಕನಹಳ್ಳಿ ಮಂಜು, ಬಿಳೇಕಹಳ್ಳಿ**
ಭಟ್ರೇ, ನಿಖಿಲ್ ಕುಮಾರಸ್ವಾಮಿ ಚುನಾವಣಾ ಪ್ರಚಾರದಿಂದ ದೂರವಿದ್ದಾರಲ್ಲ?
– ಬೀಳೋ ಮತಗಳೂ ಬೀಳದಿರಬಹುದು ಎಂಬ ಮುಂದಾಲೋಚನೆಯಂತೆ!

- **ಜಯಂತ ಹೆಗಡೆ, ಸಿದ್ದಾಪುರ**
ಭಟ್ರೇ, ಜನ ನನ್ನನ್ನು ಸುಮ್ಮನೆ ಅಪಾರ್ಥ ಮಾಡಿಕೊಳ್ಳುತ್ತಾರೆ, ಏನು ಮಾಡಲಿ?
–ಹೊಟೇಲಿಗೆ ಹೋಗಿ ಏನೇನು 'ಐಟೆಮ್' ಇದೆ ಅಂತ ಕೇಳಿದರೆ ಇನ್ನೇನು ಮಾಡ್ತಾರೆ?!

- **ಎಸ್.ನವೀನ ಮುದ್ದಪ್ಪ, ಬಾಣಸವಾಡಿ**
ಸಾರ್, ಕರೋನಾದಿಂದ ಲಾಭಗಳೂ ಇವೆ ಅಲ್ವಾ ?
– ಹೂಂ.. ಮಾಸ್ಕ್ ಧರಿಸಿ ಸಾಲ ಕೊಟ್ಟವರ ಮುಂದೆ ಎದೆಯುಬ್ಬಿಸಿ ನಡೆದರೂ ಗೊತ್ತಾಗೊಲ್ಲ !

- **ಶೋಭಾ ಉಪಾಧ್ಯ, ಶಿರಸಿ**
ಭಟ್ರೇ, ಪ್ರೀತಿಯನ್ನು ನಿವೇದಿಸಿಕೊಳ್ಳಲು ಸೂಕ್ತ ಜಾಗವೇ ಸಿಗುತ್ತಿಲ್ಲವಲ್ಲ?
– ರಸ್ತೆ ಬದಿ ಪಾನಿಪೂರಿ ಅಂಗಡಿ ಓಪನ್ ಆಗೋ ತನಕ ತಡ್ಕೊಳಮ್ಮಾ!

- **ರಾಜು ಪತ್ತಾರ, ಹುಬ್ಬಳ್ಳಿ**
ಭಟ್ರೇ, ನಂಬರ್ ಒನ್ ಪತ್ರಕರ್ತ ಅಂತ ನಿರ್ಧರಿಸುವುದು ಹೇಗೆ ?
– ಆಗಾಗ ಮೂತ್ರ ವಿಸರ್ಜನೆಗೆ ಹೋಗುವವನೇ ನಂಬರ್ ಒನ್ ಪತ್ರಕರ್ತ!

- **ತಾರಾ ಕುಲಕರ್ಣಿ, ಧಾರವಾಡ**
ಭಟ್ರೇ, ಇಂದು ಸಾಂಬಾರು ಮಾಡಬೇಕೋ, ಸಾರು ಮಾಡಬೇಕೋ ಎಂದು ಕೇಳಿದರೂ ಗಂಡ ಉತ್ತರಿಸುವುದಿಲ್ಲ?
– ನೀನು ಮಾಡಿದ್ದನ್ನು ಸೇವಿಸಿದ ನಂತರ ಅದಕ್ಕೆ ಹೆಸರಿಡೋಣ ಎಂದು ನಿನ್ನ ಯಜಮಾನರು ಯೋಚಿಸಿರಬಹುದು!

ಬಳಕೆಯಿಂದ ಮಾತ್ರ ಕನ್ನಡ ಭಾಷೆಯ ಉಳಿವು

ಅಭಿಮತ

ಶ್ರೀವರಸದ್ಯೋಜಾತ ಸ್ವಾಮೀಜಿ

varasadyojatha2015@gmail.com

ದ್ರಾವಿಡ ಭಾಷೆಗಳಲ್ಲೊಂದಾದ ಕನ್ನಡ ಭಾಷೆಯು ಸರಿ ಸುಮಾರು 2500 ವರ್ಷಗಳ ಇತಿಹಾಸ ದೊಂದಿಗೆ ಜನಮಾನಸದಲ್ಲಿ ಸಿರಿಗನ್ನಡವಾಗಿ ನೆಲೆಯೂರಿದೆ. ಕನ್ನಡವೇ ನಮ್ಮ ಜೀವ, ಕನ್ನಡವೇ ನಮ್ಮ ಜೀವಾಳ! ಎನ್ನುವಂತಾಗಿದೆ. ಕ್ರಿ.ಪೂ. 3ನೇ ಶತಮಾನದ ಹೊತ್ತಿಗಾಗಲೇ ಕನ್ನಡ ಲಿಖಿತ ರೂಪದಲ್ಲಿ ಬೆಳೆದು ನಿಂತಿತ್ತು. ಕನ್ನಡದ ಮೊಟ್ಟ ಮೊದಲ ಶಾಸನ ಎಂದೇ ಕರೆಯಲ್ಪಡುವ ಹಲ್ಮಿಡಿ ಶಾಸನ 4ನೇ ಶತಮಾನದಲ್ಲಿ ದೊರೆತಿದ್ದರಿಂದ ಕನ್ನಡ ಭಾಷೆ ಅತೀ ಪುರಾತನ ವಾದದ್ದು ಎಂಬುದಕ್ಕೆ ಪುಷ್ಟಿ ನೀಡಿದೆ.

ಕರುನಾಡನ್ನು ಆಳಿದ ಮೊದಲ ರಾಜಮನೆತನ ಕದಂಬರಿಂದ ಹಿಡಿದು ಗಂಗರು, ಮೌರ್ಯರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಹೊಯ್ಸಳರು ಮತ್ತು ಜಯ ನಗರ ಅರಸರ ಕಾಲದಲ್ಲಿ ಕನ್ನಡವು ಆಡಳಿತ ಭಾಷೆಯಾಗಿ ರೂಪುಗೊಂಡಿತ್ತು. ಅನೇಕ ಈ ಅರಸ ಮನೆತನದ ಕವಿ ಪುಂಗವರು ಸಾಹಿತ್ಯ ರಚನೆ, ಕಾವ್ಯ, ಹಾಡು, ಕೃತಿಗಳನ್ನು ಕನ್ನಡದಲ್ಲಿ ರಚಿಸಿ ಕನ್ನಡ ಸಾಹಿತ್ಯ ಲೋಕಕ್ಕೆ ಅಮೂಲ್ಯ ಕೊಡುಗೆ ನೀಡಿದರು. ಕನ್ನಡ ಭಾಷೆಯು ಆಡಳಿತ ಭಾಷೆಯಾಗಿತ್ತು ಎಂಬುವುದಕ್ಕೆ ನಾವು ಹಲವು ನಿದರ್ಶನಗಳನ್ನು ಕಂಡಿದ್ದೇವೆ. ಕನ್ನಡ ಭಾಷೆಯ ಉಗಮವನ್ನು ಗಮನಿಸಿದಾಗ ತಮಿಳು ಭಾಷೆಗಿಂತ ಕನ್ನಡ ಭಾಷೆಯು ಮೊಟ್ಟ ಮೊದಲಿಗೆ ಪ್ರವರ್ಧಮಾನಕ್ಕೆ ಬಂದಿದೆ.

ಕ್ರಿ.ಶ 8ನೇ ಶತಮಾನದಲ್ಲಿ ಅಮೋಘವರ್ಷ ನೃಪತುಂಗನು 'ಕವಿರಾಜ ಮಾರ್ಗ' ಗ್ರಂಥವನ್ನು ರಚಿಸಿದ್ದನು. ಕ್ರಿ.ಶ 9ನೇ ಶತಮಾನದ ಆದಿಕವಿ ಎಂದೇ ಕರೆಯಲ್ಪಡುವ ಪಂಪನು 'ಆದಿಪುರಾಣ' ಮತ್ತು 'ವಿಕ್ರಮಾರ್ಜುನ ವಿಜಯ' ಎಂಬ ಮೇರು ಕೃತಿಗಳನ್ನು ಚಂಪೂ ಶೈಲಿಯಲ್ಲಿ ರಚಿಸಿದರೆ, ಕೋಗಳಿಯ ಶಿವಕೋಟ್ಯಾಚಾರ್ಯರು 'ವಡ್ಡಾರಾಧನೆ' ರಚಿಸಿ ಕನ್ನಡದ ಕಂಪನ್ನು ಹರಡಿದರು.

12ನೇ ಶತಮಾನದ ಆರಂಭದಲ್ಲಿ ವಚನ ಸಾಹಿತ್ಯ ಜನನವಾಗಿ ಹಲವು ವೈಶಿಷ್ಟ್ಯಗಳಿಂದ ಸಾಮಾಜಿಕ ಕಳಕಳಿ, ಧಾರ್ಮಿಕ ನಂಬಿಕೆಯಿಂದ ತನ್ನದೇ ಆದ ಹೆಗ್ಗುರುತು ಮೂಡಿಸಿತು. ಅಲ್ಲಮ ಪ್ರಭು, ಜಗಜ್ಯೋತಿ ಬಸವೇಶ್ವರ, ಜೇಡರ ದಾಸಿಮಯ್ಯ, ಅಂಬಿಗರ ಚೌಡಯ್ಯ, ಅಕ್ಕಮಹಾದೇವಿ ಮುಂತಾದ ವರು ವಚನಗಳ ಕ್ರಾಂತಿ ಮಾಡಿದರು. ಬಸವಣ್ಣ ನವರು ಸಮಾಜಕ್ಕೆ ಅಂಟಿಕೊಂಡಿದ್ದ ಪಿಡುಗುಗಳ ನಿರ್ಮೂಲನೆಗೆ ಪಣತೊಟ್ಟು, ಸಮಾಜ ದಲ್ಲಿ ಅಮೂಲಾಗ್ರ ಬದಲಾವಣೆಗೆ ಮುನ್ನುಡಿ ಬರೆದರು. ಕಾಯಕವೇ ಕೈಲಾಸ ಎಂದು ಕಾಯಕದಲ್ಲಿಯೇ ಕೈಲಾಸದ ದರ್ಶನ ಮಾಡಿಸಿದರು. ನಂತರದಲ್ಲಿ ಕನ್ನಡವು ಸಬಲವಾಗಿ ಬೆಳೆದು ನಿಂತಿತು. ಕುಮಾರ ವ್ಯಾಸ ಕರ್ನಾಟಕ ರತ್ನ ಕಥಾ ಮಂಜರಿ ಯನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿ ಅತ್ಯಂತ ಜನಪ್ರಿಯ ವಾದನು. ಕುಮಾರವ್ಯಾಸ ಹಾಡಿದ ನೆಂದರೆ, ಕಲಿಯುಗ ದ್ವಾಪರ ವಾಗುವುದು, ಭಾರತ ಕಣ್ಣಲಿ ಕುಣಿಯುವುದು, ಮೈಯಲಿ ಮಿಂಚಿನ ಹೊಳೆ ತುಳುಕಾಡುತ್ತಿತ್ತು.

15ನೇ ಶತಮಾನದಿಂದ ಆರಂಭಗೊಂಡು ಭಕ್ತಿಯನ್ನೇ ಪ್ರಧಾನ ಮಾಡಿಕೊಂಡು ತತ್ವ ಪದಗಳ ಮೂಲಕ ಪುರಂದರ ದಾಸರು, ಕನಕ ದಾಸರು ಭಕ್ತಿಯ ಸುಧೆಯನ್ನು ಹರಿಸಿದರು. ದಾಸ ಸಾಹಿತ್ಯ ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ಬುನಾದಿಯಾಗಿದೆ ಎಂಬುದು ಗಮನಾರ್ಹ. ಬ್ರಿಟಿಷರ ಆಡಳಿತದ ತುಳಿತಕ್ಕೆ ಒಳಗಾಗಿ ಬೆಳಕು ಕಾಣದೇ ಇದ್ದ ಕನ್ನಡ ಭಾಷೆ 19ನೇ ಶತಮಾನದ ಅಂಚಿನಲ್ಲಿ ಮತ್ತು 20ನೇ ಶತಮಾನದಲ್ಲಿ ಹೊಸ ಹುಟ್ಟು ಪಡೆದುಕೊಂಡಿತು. ಬಿ.ಎಂ.ಶ್ರೀ ಆಧುನಿಕ ಕನ್ನಡ ಸಾಹಿತ್ಯಕ್ಕೆ ಹೊಸ ಮೆರುಗನ್ನು ನೀಡಿದ ಮೇರು ಕವಿ.

ಕನ್ನಡ ಮಾತನಾಡಲು ಹಿಂಜರಿಯುತ್ತಿದ್ದ ಕಾಲಘಟ್ಟದಲ್ಲಿ ಕನ್ನಡಕ್ಕಾಗಿ ಧ್ವನಿ ಮೊಳಗಿಸಿ ಕನ್ನಡಕ್ಕಾಗಿ ಜೀವನವನ್ನೇ ಮುಡುಪಾಗಿಟ್ಟವರು ಬಿ.ಎಂ.ಶ್ರೀ. 'ಕರುಣಾಳು ಬಾ ಬೆಳಕೆ, ಮುಸುಕಿದೀ ಮಬ್ಬಿನಲಿ, ಕೈ ಹಿಡಿದು ನಡೆಸೆನ್ನನು' ಎಂದು ಕನ್ನಡ ನುಡಿದೇವಿಯನ್ನು ಕರೆದರು. ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ತಿ.ನಂ.ಶ್ರೀ, ರಾಜರತ್ನಂ, ನರಸಿಂಹಾಚಾರ್ ಮುಂತಾದ ಕವಿರತ್ನರನ್ನು ಬಿ. ಎಂ.ಶ್ರೀಯವರು ತಮ್ಮ ಗರಡಿಯಲ್ಲಿ ಬೆಳೆಸಿ ಕನ್ನಡ ಸಾಹಿತ್ಯ ಲೋಕಕ್ಕೆ ಬರಮಾಡಿಕೊಂಡರು. ಕುವೆಂಪು, ದ.ರಾ. ಬೇಂದ್ರೆ, ಶಿವರಾಮ ಕಾರಂತರು, ಮಾಸ್ತಿ, ಅನಕೃ, ಯು.ಆರ್. ಅನಂತಮೂರ್ತಿ, ವಿ.ಕೃ. ಗೋಕಾಕ್, ಡಿ.ವಿ.ಜಿ, ಗಿರೀಶ್ ಕಾರ್ನಾಡ್, ಕಂಬಾರರು, ನಿಸಾರ್ ಅಹಮದ್ ಇನ್ನೂ ಅನೇಕ ಕವಿಗಳ ಸಾಲು – ಸಾಲು ಕೃತಿ, ವಿಮರ್ಶೆ, ಕವನ, ಪ್ರಬಂಧ, ನಾಟಕಗಳನ್ನು ರಚಿಸಿ ಭುವನೇಶ್ವರಿಗೆ ನುಡಿ ತೋರಣವನ್ನು ಕಟ್ಟಿದರು.

ಜಾನಪದ ಸಾಹಿತ್ಯ ಲಿಖಿತ ರೂಪದಲ್ಲಿ ಇರದೇ ಜನರ ಬಾಯಿಯಿಂದ ಬಾಯಿಗೆ ವರ್ಗಾವಣೆ ಯಾಗುತ್ತಿದ್ದವು. ತಮ್ಮ ದೈನಂದಿನ ಜೀವನದ ಕಷ್ಟ – ಸುಖ, ಜೀವನ ಕ್ರಮ, ವೃತ್ತಿಗನುಣವಾಗಿ ಹುಟ್ಟಿಕೊಂಡ ಝರಿಯೇ ಜಾನಪದ ಸಾಹಿತ್ಯ. ವಿಶಿಷ್ಟ ಭಾಷೆ, ವಿಶಿಷ್ಟ ಶೈಲಿ, ಮನ ಮುಟ್ಟುವ ಸಾಲುಗಳಿಂದ ಉತ್ತರ ಕರ್ನಾಟಕ ಭಾಗಗಳಲ್ಲಿ ಹಾಡು, ಗಾದೆ, ಒಗಟು, ಗೀಗೀ ಪದ, ಸುಗ್ಗಿ ಪದ, ಲಾವಣಿ ಪದಗಳಲ್ಲಿ ಜಾನಪದವು ಮೈದೋರಿದರೆ, ದಕ್ಷಿಣ ಕರ್ನಾಟಕ ಭಾಗಗಳಲ್ಲಿ ಯಕ್ಷಗಾನದಲ್ಲಿ ನೆಲೆಯೂರಿತು. ನವ್ಯ ಸಾಹಿತ್ಯದಲ್ಲಿ ಕವಿಗಳು ತಮ್ಮ ಜೀವನದ ಆಗು – ಹೋಗುಗಳನ್ನು, ನೋವು – ನಲಿವುಗಳನ್ನು ಕವನ – ಕತೆಗಳ ರೂಪದಲ್ಲಿ ಹೊರಹಾಕಿದರು. ಮಾನವನು ಎಲ್ಲಾ ಮಗ್ಗುಲು ಗಳನ್ನು – ಮಜಲುಗಳನ್ನು ಕಾಣಬೇಕು. ಭಾವ ಅಭಿವ್ಯಕ್ತವಾಗಬೇಕೆಂದು ಗೋಪಾಲ ಕೃಷ್ಣ ಅಡಿಗರು ಭೂಮಿಗೀತ, ಚಂಡ ಮದ್ದಳೆ ಬರೆಯುವುದರ ಮೂಲಕ ನವ್ಯ ಸಾಹಿತ್ಯಕ್ಕೆ ನಾಂದಿ ಹಾಡಿ, ನವ್ಯ ಸಾಹಿತ್ಯದ ಪಿತಾಮಹರೆನಿಸಿಕೊಂಡರು.

ಅ ಇ ಈ ಉ ಊ ಋ
ಎ ಐ ಒ ಓ ಔ ಅಂ ಅ
ಖ ಗ ಘ ಙ
ಛ ಜ ಝ ಞ ಯ ರ ಲ
ಠ ಡ ಢ ಣ ವ ಶ ಷ
ಥ ದ ಧ ನ ಸ ಹ ಳ
ಫ ಬ ಭ

ಸಮಾಜದ ಅಂಚಿನಿಂದ ದೂರ ಉಳಿದು ಜಾತಿ ಪದ್ಧತಿ, ಸಾಮಾಜಿಕ ಅಸಮಾನತೆ, ಶೋಷಣೆ, ಅನ್ಯಾಯ, ದಬ್ಬಾಳಿಕೆ ವಿರುದ್ಧ ಸಿಡಿದೆದ್ದ ಧ್ವನಿಯೇ ದಲಿತ ಮತ್ತು ಬಂಡಾಯ ಸಾಹಿತ್ಯವಾಯಿತು. ದಶಕ ಗಳಿಂದ ಶಿಕ್ಷಣ, ಉನ್ನತ ಹುದ್ದೆಗಳಿಂದ, ಸಾಮಾಜಿಕ ಸ್ಥಾನಮಾನದಲ್ಲಿ ವಂಚಿತರಾಗಿದ್ದ ಸಮಾಜ ತಮ್ಮ ನೋವು, ಆಕ್ರಂದವನ್ನು ಸಾಹಿತ್ಯದ ಮೂಲಕ ಹೊರಹಾಕಿದರು. ಅಂಬೇಡ್ಕರ್ ಗೀತೆಗಳು, ಸಾಮಾಜಿಕ ನಾಟಕಗಳು, ಪ್ರತಿಭಟನೆ ಮೂಲಕ ಆಧುನಿಕ ಕನ್ನಡ ಸಾಹಿತ್ಯಕ್ಕೆ ದಲಿತ ಮತ್ತು ಬಂಡಾಯ ಸಾಹಿತ್ಯ ಕೊಡುಗೆ ನೀಡಿದೆ. ಹಳೆಗನ್ನಡ, ವಚನ ಸಾಹಿತ್ಯ, ನಡುಗನ್ನಡ, ದಾಸ ಸಾಹಿತ್ಯ, ನವೋದಯ, ಜಾನಪದ, ನವ್ಯ, ದಲಿತ ಮತ್ತು ಬಂಡಾಯ ಹೀಗೆ ಎಲ್ಲಾ ಕನ್ನಡ ಸೇರಿ ಸಿರಿಗನ್ನಡವಾಗಿದೆ.

ಸ್ವಾತಂತ್ರ್ಯಕ್ಕೂ ಪೂರ್ವದಲ್ಲಿ ಕರ್ನಾಟಕ ಏಕೀಕರಣ ದ ಬೀಜಬಿತ್ತಿದ್ದನ್ನು ಯಾರೂ ಮರೆಯುವಂತಿಲ್ಲ. 1912ರಲ್ಲಿ 'ಕರ್ನಾಟಕ ಗತವೈಭವ'ದ ಮೂಲಕ ಕನ್ನಡದ ಕಿಚ್ಚನ್ನು ಮೂಲೆ ಮೂಲೆಗೆ ತಿರುಗಿ ಹೊತ್ತಿಸಿದರು. 1915ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆಯಾಗಿ ಕನ್ನಡ ಕ್ರಾಂತಿಗೆ ನಾಂದಿಹಾಡಿತು. 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂದು ಹುಯಿಲಗೋಳ ನಾರಾಯಣರಾಯರು ಕನ್ನಡದ ಕಹಳೆ ಯೂದಿದರು. ಸ್ವಾತಂತ್ರ್ಯೋತ್ತರ ಭಾರತ ಭಾಷಾವಾರು ಪ್ರಾಂತ್ಯ ವಿಂಗಡಣೆ ಸಮಯ ದಲ್ಲಿ 1956ರ ನವೆಂಬರ್ 1ರಂದು ವಿಶಾಲ 'ಮೈಸೂರು ರಾಜ್ಯ' ಉಗಮವಾಯಿತು. ಆಲೂರು ವೆಂಕಟರಾಯರು ಹಂಪೆಯಲ್ಲಿ ರಾಜ್ಯೋತ್ಸವ ಆಚರಿಸಿ ಸಂಭ್ರಮಿಸಿದರು. 1973 ನವೆಂಬರ್ 1ರಂದು 'ಕರ್ನಾಟಕ' ರಾಜ್ಯವೆಂದು ಮರು ನಾಮಕರಣ ಮಾಡಲಾಯಿತು. ಕನ್ನಡ ಭಾಷೆ ಸುದೀರ್ಘ ಇತಿಹಾಸದಿಂದ ಹೊಂದಿದ ದೇವ ಭಾಷೆ. ಭಾರತದ 22 ಅಧಿಕೃತ ಭಾಷೆಗಳಲ್ಲಿ ಕನ್ನಡವೂ ಒಂದು. 2008 ಅಕ್ಟೋಬರ್ 31 ಕನ್ನಡಕ್ಕೆ 'ಅಭಿಜಾತ ಭಾಷೆ' ಮತ್ತು ಭಾರತದ ಭಾಷೆಗಳಲ್ಲಿ ನಾಲ್ಕನೇಯ ಗೌರವ ಸ್ಥಾನ ಸಿಕ್ಕಿದೆ. 8 ಜ್ಞಾನಪೀಠ ಪ್ರಶಸ್ತಿಗಳನ್ನು ಸಾಹಿತಿಗಳು ತಾಯಿ ಭುವನೇಶ್ವರಿಯ ಮುಡಿಗೇರಿಸಿದ್ದಾರೆ. ಅಭಿಜಾತ ಭಾಷೆಗಳಲ್ಲಿ ಕನ್ನಡ ಚೆನ್ನುಡಿ ಎಂದೇ ಪ್ರಸಿದ್ಧಿ ಪಡೆದಿದೆ. ಕನ್ನಡಿಗರು ಕರುಣೆಯುಳ್ಳವರು, ಅನ್ಯ ರಾಜ್ಯ, ದೇಶಗಳಿಂದ ಬಂದವರಿಗೆ ಊಟ ಮತ್ತು ವಸತಿಯನ್ನು ಕೊಟ್ಟು ನಾಡಾಭಿಮಾನ ಮೆರೆದವರು. ನಮ್ಮ ಸಹಿಷ್ಣತೆ ಯನ್ನು ಉಪಯೋಗಿಸಿಕೊಂಡು ನಮ್ಮ ಒಳ್ಳೆತನವನ್ನು ದುರುಪಯೋಗ ಪಡಿಸಿಕೊಂಡರು. ಕೆಲವರು ಇತ್ತ ಕಾಸರಗೋಡು, ಅನಂತಪುರ, ಸೊಲ್ಲಾಪುರ, ಅಕ್ಕಲಕೋಟೆ ಸೇರಿದಂತೆ ಹತ್ತು ಹಲವು ಪ್ರದೇಶಗಳನ್ನು ನಾವು ಬಿಟ್ಟು ಕೊಟ್ಟಿರುವುದು ಬೇಸರದ ಸಂಗತಿ. ಕರ್ನಾಟಕದ ಗಡಿ ವಾದದ ಸ್ವಾತಂತ್ರ್ಯ ಲಭಿಸಿ ಏಳು ದಶಕಗಳು ಕಳೆದಿದ್ದರೂ ಬಗೆಹರಿದಿಲ್ಲ. ಜೊತೆಗೆ ನದಿ ನೀರು ಹಂಚಿಕೆಯಂಥ ಹಲವಾರು ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡಾಗ ಕನ್ನಡ ನಾಡು ಇನ್ನೂ ಸುಭಿಕ್ಷೆಯ ಬೀಡಾಗುತ್ತದೆ.

ಕನ್ನಡ ಭಾಷೆಯನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಅಭಿವೃದ್ಧಿಗೊಳಿಸುವ, ಕನ್ನಡದ ದೀಪ ಬೆಳಗಿಸುವ ಕಾರ್ಯವನ್ನು ಪ್ರತಿಯೊಬ್ಬ ಕನ್ನಡಿಗ ಮಾಡಬೇಕು. ಕರ್ನಾಟಕದಲ್ಲಿ ಕನ್ನಡಿಗರಿಗೆ ಮೊದಲ ಪ್ರಾತಿನಿಧ್ಯವಿರಬೇಕು. ಕರ್ನಾಟಕದಲ್ಲಿ ಶೇ.90ರಷ್ಟು ಉದ್ಯೋಗ ಮೀಸಲಾತಿ ನೀಡುವ ಕೆಲಸವನ್ನು ಸರಕಾರಗಳು, ಸಂಘ-ಸಂಸ್ಥೆಗಳು ಮಾಡಬೇಕಾಗಿದೆ. ಕನ್ನಡಿಗರ ತಾಳ್ಮೆಯನ್ನು ಕೆಣುಕುವ ಪ್ರಯತ್ನವನ್ನು ನೆರೆರಾಜ್ಯದವರು ಮಾಡಬಾರದು. ಹಾಲಿ ಇರುವ ವಾದಗಳನ್ನು ಬಗೆಹರಿಸುವ ಕೆಲಸವನ್ನು ರಾಜಕೀಯ ನಾಯಕರು ಮಾಡಬೇಕು.

ಕನ್ನಡ ಭಾಷೆಯನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಬಳಕೆಗೆ ಬರುವಂತೆ ಹಾಡು, ಕಾವ್ಯ, ಕೃತಿ, ನಾಟಕ, ಕಾದಂಬರಿಗಳನ್ನು ಮನೆ – ಮನೆಗೆ ತಲುಪುವಂತೆ ಮಾಡಬೇಕಾಗಿದೆ. ಕನ್ನಡ ಭಾಷೆಯಲ್ಲಿ ಎಲ್ಲಾ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಿ ಅಂತಾರಾಷ್ಟ್ರೀಯ ಮಟ್ಟದ ಭಾಷೆಯನ್ನಾಗಿ ಪರಿವರ್ತಿಸಲು ಪಣತೊಡಬೇಕು. ದೈನಂದಿನ ಜೀವನದಲ್ಲಿ ಕನ್ನಡ ಬಳಸೋಣ; ಏಕೆಂದರೆ ಭಾಷೆ ಬೆಳೆಯುವುದು ಮತ್ತು ಉಳಿಯುವುದು ಪ್ರಶಸ್ತಿ ಮತ್ತು ಭಾಷಣ ಮಾಡುವುದರಿಂದಲ್ಲ; ಅದನ್ನು ಬಳಸುವುದರಿಂದ ಮಾತ್ರ ಸಾಧ್ಯ ಎನ್ನುವ ಸತ್ಯ ಅರಿಯಬೇಕು. ಕನ್ನಡವೇ ಸತ್ಯ ಕನ್ನಡವೇ ನಿತ್ಯ. ಜೈ ಭುವನೇಶ್ವರಿ.

ಕನ್ನಡ ಭಾಷೆಯಲ್ಲಿ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಿ ಅಂತಾರಾಷ್ಟ್ರೀಯ ಭಾಷೆಯನ್ನಾಗಿ ಪರಿವರ್ತಿಸಬೇಕಿದೆ. ಕನ್ನಡ ಭಾಷೆಯನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಅಭಿವೃದ್ಧಿಗೊಳಿಸುವ, ಕನ್ನಡದ ದೀಪ ಬೆಳಗಿಸುವ ಕಾರ್ಯವನ್ನು ಪ್ರತಿಯೊಬ್ಬ ಕನ್ನಡಿಗ ಮಾಡಬೇಕು.